# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** QS / US News Global Ranking 500 ರೊಳಗೆ ಸ್ಥಾನ ಪಡೆದ ವಿದೇಶಿ ವಿಶ್ವ ವಿದ್ಯಾಲಯಗಳಿಂದ Offer letter ಪಡೆದಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಪ್ರಬುದ್ಧ ಯೋಜನೆಯಡಿ ಉನ್ನತ ವ್ಯಾಸಂಗಕ್ಕೆ ಆಯ್ಕೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಸಕಇ 468 ಪಕವಿ 2021 ದಿನಾಂಕ:11.08.2021.
2. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಸಕಇ 468 ಪಕವಿ 2020 ದಿನಾಂಕ: 21.09.2021.
3. ಸರ್ಕಾರದ ಆದೇಶ ಸಂಖ್ಯೆ: ಸಕಇ 494 ಎಸ್ಎಲ್‌ಪಿ 2022 ದಿನಾಂಕ:08.07.2022.
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಏಕ ಕಡತ ಸಂಖ್ಯೆ: SWD-PETC0S-6/2/2022-PETC-SOCIAL WELFARE COMMISSIONER.

*****

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಿಂದ (3) ರ ವರೆಗಿನ ಸರ್ಕಾರದ ಆದೇಶಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಪ್ರಬುದ್ಧ ಯೋಜನೆಯಡಿ ಉನ್ನತ ವ್ಯಾಸಂಗಕ್ಕೆ ಆಯ್ಕೆ ಮಾಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಸರ್ಕಾರದ ಆದೇಶದನ್ವಯ ಪ್ರಬುದ್ಧ ಯೋಜನೆಯಡಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು QS / US News Global Ranking 300 ರೊಳಗೆ ಸ್ಥಾನ ಪಡೆದ ವಿದೇಶಿ ವಿಶ್ವ ವಿದ್ಯಾಲಯಗಳಿಂದ Un Conditional Offer letter ಪಡೆದಿರಬೇಕು ಎಂಬ ಮಾನದಂಡವನ್ನು ನಿಗಧಿಪಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಕಛೇರಿಯ ಏಕ ಕಡತದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳೊಂದಿಗೆ

ನಡೆದ ಸಭೆಯಲ್ಲಿ QS / US News Global Ranking 300 ಕ್ಕೆ ಬದಲಾಗಿ QS/US News Global Ranking 500 ರೊಳಗೆ ಸ್ಥಾನ ಪಡೆದ ವಿದೇಶಿ ವಿಶ್ವ ವಿದ್ಯಾಲಯಗಳಿಂದ Un Conditional Offer letter ಪಡೆದಿರುವ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಆದೇಶ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

1. 2022-23 ನೇ ಸಾಲಿನಿಂದ QS/US News Overall Global Ranking 500 ರಲ್ಲಿ ಪ್ರವೇಶ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಪ್ರಬುದ್ಧ ಯೋಜನೆಯಡಿ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
2. QS/US News Overall Global Rank ಪ್ರತಿ ವರ್ಷ ಬದಲಾವಣೆಯಾಗುತ್ತಿರುತ್ತದೆ. ಇಲಾಖೆಯಿಂದ ಅರ್ಜಿ ಸ್ವೀಕಾರ ಅಧಿಸೂಚನೆ ಹೊರಡಿಸಿದ ಪೂರ್ವದಲ್ಲಿ QS/US News Overall Global Ranking 500 ಗುಂಪಿನಿಂದ ವಿಶ್ವ ವಿದ್ಯಾಲಯ ಹೊರಬಿದ್ದರೆ ಇದಕ್ಕೆ ಇಲಾಖೆ ಜವಾಬ್ದಾರಿಯಾಗಿರುವುದಿಲ್ಲ. ಇಲಾಖೆ ಅಧಿಸೂಚನೆ ಹೊರಡಿಸಿದ ಸಂದರ್ಭದಲ್ಲಿ ಅಭ್ಯರ್ಥಿಯು ಸಲ್ಲಿಸಿದ Un conditional Offer Letter ಇಲಾಖೆ ನಿಗದಿಪಡಿಸಿದ QS/US News Overall Global Ranking 500 ರೊಳಗೆ ಇರಬೇಕು.
3. ವರ್ಷ ಪೂರ್ತಿ Un conditional Offer Letter ಪಡೆದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು Portal ಅನ್ನು ತೆರೆಯಲಾಗುವುದು.
4. ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಸ್ವೀಕೃತಗೊಂಡ ಅರ್ಜಿಗಳನ್ನು ಪ್ರತಿ ತಿಂಗಳ ಮೊದಲ ವಾರದಲ್ಲಿ ಪರಿಶೀಲನೆ ನಡೆಸಿ ಪ್ರಬುದ್ಧ ಯೋಜನೆಯ ಮಾರ್ಗಸೂಚಿ ಅನ್ವಯ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
5. ಆಯ್ಕೆಗೆ ಅರ್ಹರಾದ ಅಭ್ಯರ್ಥಿಗಳಿಗೆ ಮಂಜೂರಾತಿ ಪತ್ರವನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಆಯಾ ತಿಂಗಳ ಮೂರನೇ ವಾರದೊಳಗೆ ವಿತರಿಸಲಾಗುವುದು.
6. ಆಯಾ ಆರ್ಥಿಕ ವರ್ಷಕ್ಕೆ ಒದಗಿಸಿದ ಅನುದಾನಕ್ಕೆ ನಿಗದಿಪಡಿಸಿಗೊಂಡ ಭೌತಿಕ ಗುರಿಗೆ ಅನುಗುಣವಾಗಿ ಬಂದ ಅರ್ಜಿಗಳನ್ನು ಪ್ರಬುದ್ಧ ಮಾರ್ಗಸೂಚಿ ಅನ್ವಯ ಮಂಜೂರಾತಿ ಪತ್ರವನ್ನು ನೀಡಲಾಗುವುದು.
7. ಪ್ರತಿ ವರ್ಷ ಪ್ರಬುದ್ಧ ಯೋಜನೆಯಡಿ 100 ಅಭ್ಯರ್ಥಿಗಳ ಗುರಿಯನ್ನು ಇಟ್ಟುಕೊಳ್ಳುವುದು. 100 ಗುರಿಯನ್ನು ಮೀರಿ ಬರಬಹುದಾದ ಅರ್ಜಿಗಳನ್ನು ಪರಿಶೀಲಿಸಿ, ಅರ್ಹರಾದ ಅಭ್ಯರ್ಥಿಗಳಿಗೆ ಮಂಜೂರಾತಿ ಪತ್ರವನ್ನು ನೀಡುವುದು. ಹೀಗೆ 100 ಗುರಿಗಿಂತ ಹೆಚ್ಚುವರಿಯಾಗಿರುವ ಅಭ್ಯರ್ಥಿಗಳನ್ನು